ಸ್ಥೂಲವಾಗಿ ಇವರ ಕವಿತೆಯೇ, ಸೂಕ್ಷ್ಮವಾಗಿ ಬದುಕು ಮತ್ತದರ ಆಧ್ಯಾತ್ಮಿಕತೆ.'' ಇವು ಅವರ ಸಹ ಕವಿ ಸ. ರಘುನಾಥರ ಅಭಿಪ್ರಾಯ.

``ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ಇಂದಿಗೂ ಬಸ್ಸು ಬಾರದ ಹಳ್ಳಿಯೊಂದರಲ್ಲಿ ಶಾನುಭೋಗರ ಮೊಮ್ಮಗನಾಗಿಯೂ, ಪ್ರೈಮರಿ ಸ್ಕೂಲ್ ಮೇಷ್ಟ್ರ ಮಗನಾಗಿಯೂ ಹುಟ್ಟಿದ ನನ್ನದು ಮಧ್ಯಮವರ್ಗದ ಮನಸ್ಸು, ಹೊಲದಲ್ಲಿ ಉತ್ತು ಬಿತ್ತಿ ಬೆಳೆಯದ, ಆದರೆ ಸರ್ವ ಸಂಗತಿಗಳನ್ನೂ ಅರಿತವನು. ಮೇಲು ಜಾತಿಯ ಒಂಟಿ ಕುಟುಂಬದಲ್ಲಿ ಹುಟ್ಟಿ, ಊರಿನ ಇತರರೊಡನೆಯೇ ಬಾಲ್ಯವನ್ನು ಕಟ್ಟಿಕೊಂಡವನು. ಮಣ್ಣಿನ ಮಗನಲ್ಲದಿದ್ದರೂ ಮಣ್ಣಿನ ಜೀವಂತಿಕೆ ಮತ್ತು ಅದರ ದೂಳಿನ ಜೊತೆ ಆಡಿದವನು. ದುಡ್ಡಿನ ತಾಕತ್ತು ಇರದಿದ್ದರೂ ಅದನ್ನು ತೋರ್ಪಡಿಸಬಾರದೆಂಬ ಎಚ್ಚರಿಕೆಯಲ್ಲಿ ನರಳಿದವನು. ಕುಟುಂಬಕ್ಕೆ ಒದಗಿದ ಆರ್ಥಿಕ ಬಿಕ್ಕಟ್ಟು ಯಾರೊಡನೆಯೂ ಹೇಳಿಕೊಳ್ಳಲಾಗದ ಸಂಕಟದಲ್ಲಿ, ಆದರೆ ಎಲ್ಲರಿಗೂ ಗೊತ್ತಿರುವ ತಲ್ಲಣದಲ್ಲಿ ದಿನಗಳು ಉರುಳಿದವು...'' ಹೀಗೆ ತಮ್ಮ ಬಾಲ್ಯ ಹಿನ್ನೆಲೆಯ ಬಗ್ಗೆ ರವೀಂದ್ರಕುಮಾರ 'ಮಯೂರ'ಕ್ಕೆ ಬರೆದ ಬರಹದಲ್ಲಿ ಹಂಚಿಕೊಂಡಿದ್ದರು (2009).



ಆಕಾಶವಾಣಿಯಲ್ಲಿ ಕಾರ್ಯಕ್ರಮ ನಿರ್ವಾಹಕರಾಗಿ ನಂತರ, ಮುಖ್ಯಸ್ಥರಾಗಿ ಅನೇಕ ವಿಭಿನ್ನ ಬಗೆಯ ಶ್ರಾವ್ಯ ಕಾರ್ಯಕ್ರಮಗಳನ್ನು ರೂಪಿಸಿ, ನಿರೂಪಿಸಿ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಪುರಸ್ಕಾರಕ್ಕೆ ಭಾಜನರಾಗಿದ್ದರು. ಐದು ಉತ್ತಮ ಸಂಕಲನಗಳನ್ನು ಪ್ರಕಟಿಸಿಯೂ, ಕಾವ್ಯ ಸಂಬಂಧಿತ ಅತ್ಯುತ್ತಮ ಪುರಸ್ಕಾರಗಳನ್ನು ಗಳಿಸಿಯೂ ರವೀಂದ್ರರ ಕಾವ್ಯದ ಬಗ್ಗೆ ನಮ್ಮ ಯಾವ ಮುಖ್ಯ ವಿಮರ್ಶಕರೂ ಒಂದು ಪೂರ್ಣ ಪ್ರಮಾಣದ ಬರಹ ಬರೆಯಲಿಲ್ಲ. ನಿನ್ನೆ ಮೊನ್ನೆ ಬರೆಯತೊಡಗಿದವರಂತೆ ನಡೆಸಿಕೊಂಡರು. ಸಾಹಿತ್ಯ ಲೋಕದ ಧೂರ್ತ ಮೌನಗಳು ನಿಗೂಢ, ಕೆಲವರ ಬಗ್ಗೆ ನಡೆಯಬೇಕಾದ ಸಾಹಿತ್ಯಕ ಚರ್ಚೆಗಳು ಯಾಕೆ ಕತ್ತಲಲ್ಲೇ ಉಳಿಯುತ್ತವೆ ಎಂಬ ಬಗ್ಗೆ ಅನೇಕ ಬಾರಿ ನಾವಿಬ್ಬರೂ ಚರ್ಚಿಸಿದ್ದೆವು. ಆದರೆ, ತಮ್ಮ ಮಾಧ್ಯಮದಲ್ಲಿ ತಮ್ಮ ಸಹಲೇಖಕರ ಕಿರಿಯರ ಪ್ರೋತ್ಸಾಹದ ವಿಚಾರದಲ್ಲಿ ರವೀಂದ್ರಕುಮಾರ ಉದಾರಿಯಾಗಿದ್ದರು. ಅವರಿಗೆ ನೀಡಬೇಕಾದ ವೇದಿಕೆಯಲ್ಲಿ ಅತ್ಯಂತ ನಿಷ್ಪಕ್ಷಪಾತವಾಗಿ ನಡೆದುಕೊಳ್ಳುತ್ತಿದ್ದರು. ಮಾಧ್ಯಮಗಳಲ್ಲಿರುವವರ ದುರಂತ ಇದು. ದಾಟಲಷ್ಟೇ ದೋಣಿ, ದಾಟಿದ ಮೇಲೆ ಅಂಬಿಗ ದೋಣಿಗಳೆರಡೂ ಮರೆಯುವ ಸಂಗತಿಗಳು.